# ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

**ಅರಳುಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆ, ಆಜ಼ಾದ್ ಪಾರ್ಕ್ ಹತ್ತಿರ, ಚಿಕ್ಕಮಗಳೂರು-577101**

ದೂರವಾಣಿ ಸಂಖ್ಯೆ: 08262-295347 ಜಾಲತಾಣ: https://cimschikkamagaluru.karnataka.gov.in ಇ-ಮೇಲ್: directorcims2020@gmail.com


ಸಂಖ್ಯೆ:ಚಿ.ವೈ.ವಿ.ಸಂ/ನರ್ಸಿಂಗ್ ನೇಮಕಾತಿ/01/2022-23 ದಿನಾಂಕ:23:03:2023

## ನೇಮಕಾತಿ ಪ್ರಕಟಣೆ

*****

ಸರ್ಕಾರದ ಆದೇಶ ಸಂಖ್ಯೆ: ಎಂಇಡಿ 19 ಎಂಎಂಸಿ 2021 ಬೆಂಗಳೂರು, ದಿನಾಂಕ:31.01.2023 ರಂತೆ ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಾದ ಅರಳುಗುಪ್ಪೆ ಮಲ್ಲೇ ಗೌಡ ಜಿಲ್ಲಾ ಆಸ್ಪತ್ರೆ ನಿರ್ವಹಣೆಗಾಗಿ ಸೃಜನೆಯಾಗಿರುವ ಹುದ್ದೆಗಳ ಪೈಕಿ 35 Staff Nurse ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಸಂಸ್ಥೆಯ ಬೈಲಾ ಹಾಗೂ ವೃಂದ ಮತ್ತು ನೇಮಕಾತಿ ಆಧಾರದ ಮೇಲೆ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಹುದ್ದೆಗೆ ತಕ್ಕಂತೆ ವಿದ್ಯಾರ್ಹತೆ ಹೊಂದಿದ ಶೈಕ್ಷಣಿಕ ದಾಖಲಾತಿಗಳ ಒಂದು ಪ್ರತಿ ಹಾಗೂ ಮೂಲ ದಾಖಲಾತಿಗಳೊಂದಿಗೆ ಅರ್ಜಿಯನ್ನು ದಿನಾಂಕ:10.04.2023 ಸಂಜೆ:05.00 ಗಂಟೆಯೊಳಗಾಗಿ, ನಿರ್ದೇಶಕರ ಕಛೇರಿ, ಹಳೆಯ ಪಿ. ಡಬ್ಲ್ಯೂ. ಡಿ ಬಿಲ್ಡಿಂಗ್, ಆಜಾದ್ ಪಾರ್ಕ್ ಹತ್ತಿರ, ಚಿಕ್ಕಮಗಳೂರು ಇಲ್ಲಿಗೆ ಮುದ್ದಾಂ/ಅಂಚೆ ನೋಂದಣಿ ಮೂಲಕ (Register Post) ಸಲ್ಲಿಸುವುದು.

| ಕ್ರ. ಸಂ | ಹುದ್ದೆಗಳ ವಿವರ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ವಯೋಮಿತಿ | ಮಾಸಿಕ ವೇತನ |
|---|---|---|---|---|---|
| 01 | Staff Nurse | 35 | 1) ಬಿ.ಎಸ್.ಸಿ ನರ್ಸಿಂಗ್ ಕೋರ್ಸ್ ನಲ್ಲಿ ಪದವಿ ಹೊಂದಿರಬೇಕು.<br>2) ಎಂ.ಎಸ್ಸಿ. ನರ್ಸಿಂಗ್ ಪದವಿ ಹೊಂದಿದ ಅರ್ಭರ್ಥಿಗಳಿಗೆ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. | 1) SC/ST or Cat.1-43 Years.<br>2) Cat. II(a) or II(b), III(a) or III(b) of other Back ward Classes-40 Years and<br>3) General-38 Years. | 20000/- ಸಂಚಿತ ವೇತನ |

**ಷರತ್ತು ಮತ್ತು ನಿಭಂದನೆಗಳು:**

1) ಮೇಲಿನ ಎಲ್ಲಾ ಹುದ್ದೆಗಳಿಗೆ ಸಂಬಂಧಿಸಿದಂತೆ, ಅಭ್ಯರ್ಥಿಗಳು ಅಂಗೀಕೃತ ವಿಶ್ವವಿದ್ಯಾಲಯ ಹಾಗೂ ಮಾನ್ಯತೆ ಹೊಂದಿದ ಕಾಲೇಜುಗಳಲ್ಲಿ ಕೋರ್ಸ್‌ನ್ನು ಹೊಂದಿರತಕ್ಕದ್ದು.
2) ನೇಮಕಾತಿಯು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಇರುತ್ತದೆ. ಯಾವುದೇ ಖಾಯಂ ನೇಮಕಾತಿಗಾಗಿ ಪರಿಗಣಿಸಲಾಗುವುದಿಲ್ಲ ಹಾಗೂ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಚಲಾಯಿಸುವಂತಿಲ್ಲ.
3) ಗುತ್ತಿಗೆ ಆಧಾರದ ಅವಧಿಯು 06 ತಿಂಗಳು ಮಾತ್ರ ಇದ್ದು, ಹಾಗೂ ಹುದ್ದೆಗಳ ನವೀಕರಣವು ಸರ್ಕಾರದ ಮುಂದಿನ ಆದೇಶಗಳಿಗೆ ಒಳಪಟ್ಟಿರುತ್ತದೆ.
4) ಕರ್ನಾಟಕ ನರ್ಸಿಂಗ್ ಕೌನ್ಸಿಲಿಂಗ್ ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಿರಬೇಕು.
5) ಪದವಿ ಪೂರೈಸಿದ ನಂತರ ಕನಿಷ್ಠ 3 ವರ್ಷಗಳ ಕರ್ತವ್ಯದ ಅನುಭವವನ್ನು ಹೊಂದಿರತಕ್ಕದ್ದು.

ಅರ್ಜಿಯೊಂದಿಗೆ ಜನರಲ್ ಅಭ್ಯರ್ಥಿಗಳಿಗೆ ರೂ.500/- ಹಾಗೂ ಎಸ್.ಸಿ/ಎಸ್.ಟಿ/ಕ್ಯಾಟಗರಿ-1 ಅಭ್ಯರ್ಥಿಗಳಿಗೆ ರೂ.250/- ಶುಲ್ಕವನ್ನು ನಿರ್ದೇಶಕರು, ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು ಇವರ ಹೆಸರಿನಲ್ಲಿ ಡಿ.ಡಿ ಮೂಲಕ ಪಡೆದು ಸಲ್ಲಿಸತಕ್ಕದ್ದು. ಅರ್ಜಿಯನ್ನು ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಂತರ್ಜಾಲದಲ್ಲಿ **https://cimschikkamagaluru.karnataka.gov.in** ನ ಮೂಲಕ ಡೌನ್ ಲೋಡ್ ಮಾಡಿಕೊಂಡು ಶೈಕ್ಷಣಿಕ ದಾಖಲಾತಿಗಳೊಂದಿಗೆ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

23/03/23

ಡೀನ್ ಹಾಗೂ ನಿರ್ದೇಶಕರು

ಚಿಕ್ಕಮಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,

ಚಿಕ್ಕಮಗಳೂರು